1. 2000-01 ನೇ ಸಾಲಿಗೆ - ರೂ. 7,50,000-00
2. 2001-02 ನೇ ಸಾಲಿಗೆ - ರೂ. 25,000-00

ಆ) 1. ನೀಲಕಂಠ ನಗರದಲ್ಲಿ ಮಣ್ಣಿನ ಮತ್ತು ಜಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯ ವೆಚ್ಚ ರೂ. 75, 000-00.

2. ನೀಲಕಂಠ ನಗರದಲ್ಲಿ 17 ಬಾಕ್ಸ್ ಮಾದರಿ ಚರಂಡಿ ನಿರ್ಮಾಣ ಕಾಮಗಾರಿಗಾಗಿ ಖರ್ಚು ರೂ. 4,00,000-00

3. ಎನ್.ಜಿ. ಓ. ಕಾಲೋನಿಯಲ್ಲಿ ಮಣ್ಣಿನ ರಸ್ತೆ ನಿರ್ಮಾಣ ಕಾಮಗಾರಿಗಾಗಿ ರೂ. 25,000-00.

4. ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ರೂ. 2,75,000-00 ಗಳಿಗೆ ಅನುಮೋದನೆ ನೀಡಲಾಗಿದೆ.

ಇ)

ಸಾಲು	ಬಿಡುಗಡೆಯಾದ ಮೊಬಲಗು	ಖರ್ಚು	ಉಳಿಕೆ	ಕಾಮಗಾರಿಗಳ ವಿವರ
1998-99	7,50,000	7,50,000	-	ಪಟ್ಟಣ ವ್ಯಾಪ್ತಿಯಲ್ಲಿನ ರಸ್ತೆಗಳಿಗೆ ಡಾಂಬರೀಕರಣ ಮಾಡಿರುತ್ತದೆ.
1999-2000	30,33,302	9,64,548	20,68,754	145 ಸಂಖ್ಯೆ ಸೋಡಿಯಂ ದೀಪಗಳನ್ನು ಖರೀದಿಸಿ ಅಳವಡಿಸಲಾಗಿದೆ.
ಒಟ್ಟು	37,83,302	17,14,548	20,68,754	

ಈ) ನಂಜನಗೂಡು ಪಟ್ಟಣಕ್ಕೆ ಹೆಚ್ಚುವರಿ ಕುಡಿಯುವ ನೀರಿನ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ದಿನಾಂಕ: 25-10-1991 ರಂದು ಹಾಗೂ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 14-8-1992 ರಲ್ಲಿ ನೀಡಿದೆ. ಸದರಿ ಕಾಮಗಾರಿಯು 1994-95 ರಲ್ಲಿ ಪ್ರಾರಂಭವಾಗಿರುತ್ತದೆ. ಸದರಿ ಕಾಮಗಾರಿಗೆ ರೂಪಾಯಿ 194.50 ಲಕ್ಷಗಳು, ಪರಿಷ್ಕೃತ ಅಂದಾಜು 430.00 ಲಕ್ಷಗಳು.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿದ್ಯುತ್ ಸರಬರಾಜು ಸುಧಾರಣೆಗೆ ಕೈಗೊಂಡ ಕ್ರಮಗಳು

1062 (1476) - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಪೂರೈಕೆ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ಕುರಿತು ಯಾವುದಾದರೂ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ?

ಇ) ಇದು ಯಾವ ಸಂಸ್ಥೆ ಯಾವ ರಾಜ್ಯದ್ದು, ಇದರಿಂದ ವಿದ್ಯುತ್ ಸೇವೆ ಮತ್ತು ಆದಾಯ ಸಂಗ್ರಹಣೆಯಲ್ಲಿ ಮಹತ್ತರವಾದ ಬದಲಾವಣೆ ತರಲು ಸಾಧ್ಯವೇ?

ಈ) ಸುಧಾರಣಾ ಕ್ರಮಗಳಾವುವು? ವಿವರ ನೀಡುವುದು, ಒಪ್ಪಂದ ಎಲ್ಲಿಯವರೆಗೆ ಜಾರಿಯಲ್ಲಿರುತ್ತವೆ.

ಉ) ಒಪ್ಪಂದ ಮುಗಿದ ಬಳಿಕ ಸರ್ಕಾರದ ಮುಂದಿನ ಕ್ರಮಗಳೇನು?

ಶ್ರೀ ಬಸವರಾಜ್ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ಸರ್ಕಾರವು ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಹೆಚ್ಚಿನ ಸುಧಾರಣೆಯನ್ನು ತರುವ ಸಲುವಾಗಿ ಪ್ರಪ್ರಥಮವಾಗಿ ಭಾರತ ಸಾರ್ಕರದೊಂದಿಗೆ ಮೆಮೊರಾಂಡಮ್ ಆಫ್ ಅಗ್ರಿಮೆಂಟ್‌ನ್ನು ರಚಿಸಿ, ಅನುಸೂಚಿ ಹೊರಡಿಸಿತು. ಈ ಸುಧಾರಣೆ ಹಾಗೂ ಪುನರ್ರಚನಾ ಕಾರ್ಯಕ್ರಮಕ್ಕೆ ಬೇಕಾದ ಆರ್ಥಿಕ ಸಹಾಯವನ್ನು ಕರ್ನಾಟಕ ಆರ್ಥಿಕ ಸುಧಾರಣೆ ಸಾಲದ ಅಡಿಯಲ್ಲಿ ವಿಶ್ವಬ್ಯಾಂಕ್ ಹಾಗೂ ವಿದ್ಯುತ್ ಹಣಕಾಸು ಸಂಸ್ಥೆಯಿಂದ (ಪಿ.ಎಫ್.ಸಿ) ರಾಜ್ಯವು ಪಡೆಯುತ್ತದೆ. ಇದಲ್ಲದೆ ವಿದ್ಯುತ್ ಪೂರೈಕೆ ವೃತ್ತಗಳಾದ ಮೈಸೂರು ಬೆಳಗಾಂ, ಬಿಜಾಪುರಗಳಲ್ಲಿ ಎ.ಪಿ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಭಾರತ ಸಾರ್ಕರದಿಂದ ಸಹ ಸಹಾಯ ಪಡೆಯಲಾಗುತ್ತಿದೆ.

ಆ) ಹೌದು.

ಇ) ರಾಜ್ಯ ಸರ್ಕಾರವು ಸುಧಾರಣಾ ಮತ್ತು ಪುನರ್ರಚನೆಯ ಸಲುವಾಗಿ ವಿವಿಧ ವಿಷಯಗಳ ಮೇಲೆ ಈ ಕೆಳಕಂಡ ಸಮಾಲೋಚಕರನ್ನು ನೇಮಿಸಿದೆ.

1. ಮೆ: ಸಿ.ಎಂ.ಎಸ್. ಕಮೆರನಾ ಮೆಖೆನ್ನಾ ಯು.ಕೆ. ಹಣಕಾಸು ಮತ್ತು ವಿತರಣಾ ಖಾಸಗೀಕರಣ.
2. ಮೆ: ಪ್ರೈ ಸೆವಾಟರ್‌ಹೌಸ್ ಕೂಪರ್ಸ್ ಅಸೋಸಿಯೇಟ್ಸ್ - ಬ್ರಿಟನ್ ಸಾಂಸ್ಥಿಕ ಬಲವೃದ್ಧಿಸುವಿಕೆ ಮತ್ತು ವಿದ್ಯುತ್ ಮಾರುಕಟ್ಟೆ ಅಭಿವೃದ್ಧಿ.
3. ಮೆ: ಮಕಾನ್ (ಇಂಡಿಯಾ) ಲಿ. ಬೆಂಗಳೂರು. ಮೆ: ನೈಟ್ ಪೈಸೋಲ್ಡ್, ಬ್ರಿಟೆನ್, ಪರಿಸರ ಸಮಾಲೋಚಕರು.
4. ಮೆ: ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಅಂಡ್ ಸೋಶಿಯಲ್ ರಿಸರ್ಚ್ ಹೈದರಬಾದ್
ಸಾಮಾಜಿಕ ವಿಷಯಗಳು.

ಇದಲ್ಲದೆ, ಐ.ಡಿ.ಎಫ್.ಸಿ. ಮತ್ತು ಭಾರತ ಸರ್ಕಾರದೊಂದಿಗೆ ಮಾಡಿಕೊಂಡ ಒಪ್ಪಂದಗಳನ್ವಯ ಉತ್ಪಾದನೆ ಮತ್ತು ವಿದ್ಯುತ್ ಪೂರೈಕೆಯಲ್ಲಿ ಅನೇಕ ಸುಧಾರಣೆ ಮೈಲುಗಲ್ಲುಗಳನ್ನು ಸಾಧಿಸುವ ನಿರೀಕ್ಷೆ ಇದೆ.

ಈ) ಸುಧಾರಣಾ ಮತ್ತು ಪುನರ್ರಚನೆಗೆ ಕರ್ನಾಟಕ ರಾಜ್ಯ ಸರ್ಕಾರವು ಹಮ್ಮಿಕೊಂಡಿರುವ ಕ್ರಮಗಳಾವುವೆಂದರೆ:

1. ಹಣಕಾಸು ಮತ್ತು ವಿತರಣಾ ಖಾಸಗೀಕರಣ
2. ಸಾಂಸ್ಥಿಕ ಬಲ ವೃದ್ಧಿಸುವಿಕೆ ಮತ್ತು ವಿದ್ಯುತ್ ಮಾರುಕಟ್ಟೆ ಅಭಿವೃದ್ಧಿ
3. ಪರಿಸರ ಸಮಾಲೋಚಕರು.
4. ಸಾಮಾಜಿಕ ವಿಷಯಗಳ ಸಮಾಲೋಚಕರು

ಈ ಮೇಲಿನ ವಿಷಯಗಳ ಮುಖ್ಯ ವಿವರಗಳು ಈ ಕೆಳಕಂಡಂತಿವೆ:

ಮುಖ್ಯ ಹಿಡುವಳಿದಾರರನ್ನು ಗುರುತಿಸಿ ಅವರನ್ನು ಸುಧಾರಣಾ ಮತ್ತು ಪುನರ್‌ರಚನಾ ಕಾರ್ಯಕ್ರಮದಲ್ಲಿ ಅವರನ್ನು ಒಳಗೊಳ್ಳುವ ವಿಧಾನವನ್ನು ರೂಪಿಸುವುದು.

ವಿವಿಧ ಮುಖ್ಯ ಹಿಡುವಳಿದಾರರ ನಡುವೆ ಮಾಹಿತಿ ಹಂಚಿಕೆಕೊಳ್ಳುವುದಕ್ಕೆ ಒಂದು ಸಲಹಾ ಮತ್ತು ಭಾಗತ್ವದ ವಿಧಾನವನ್ನು ರೂಪಿಸಲಾಗುವುದು.

ವಿವಿಧ ವರ್ಗಗಳ ಮೇಲುಂಟಾಗುವ ಪ್ರತಿಕೂಲ ಪರಿಣಾಮಗಳ ವ್ಯಾಪ್ತಿಯನ್ನು ಗುರುತಿಸಿ ಗಂಡಾಂತರಗಳನ್ನು ತಗ್ಗಿಸುವ ವಿಧಾನವನ್ನು ಸೂಚಿಸುವುದು.

ಉದ್ದೇಶಿತ ಸುಧಾರಣಾ ಕಾರ್ಯಕ್ರಮದಿಂದ ಬಡವರು ಮತ್ತು ದುರ್ಬಲ ವರ್ಗದವರ ಮೇಲುಂಟಾಗುವ ಪ್ರತಿಕೂಲ ಪರಿಣಾಮದ ಮೌಲ್ಯಮಾಪನ ಮಾಡುವುದು.

ಸಾಮಾಜಿಕ ರಕ್ಷಣಾ ನೀತಿಯನ್ನು ರೂಪಿಸುವುದು.

ಮೇಲೆ ತೀರ್ಮಾನಿಸಿದ ಒಪ್ಪಂದಗಳು 2002-03,2003-04ರ ವರೆಗೆ ಜಾರಿಯಲ್ಲಿದ್ದು ಈ ಅವಧಿಯಲ್ಲಿ ವಿದ್ಯುತ್ ಪೂರೈಕೆ ಸುಧಾರಣೆಯಲ್ಲಿ ಬಹುತೇಕ ಗುರಿ ಸಾಧಿಸುವ ನಿರೀಕ್ಷೆಯಿದೆ.

ಉ) ಒಪ್ಪಂದ ಮುಗಿದ ಬಳಿಕ ಸರ್ಕಾರವು ಈ ಸುಧಾರಣಾ ಕಾರ್ಯ ಕ್ರಮದಿಂದ ಆಗಿರುವ ಸುಧಾರಣೆಗಳನ್ನು ಪರಾಮರ್ಶಿಸಿ, ಮುಂದೆ ಕೈಗೊಳ್ಳಬೇಕಾಗಿರುವ ಕಾರ್ಯಕ್ರಮವಾದ ಪ್ರಸ್ತುತ ಸ್ಥಾಪಿಸಲ್ಪಟ್ಟಿರುವ ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ವಿದ್ಯುತ್ತನ್ನು ಸಗಟಾಗಿ ಖರೀದಿಸುವುದು, ವಿದ್ಯುತ್ ಬಳಕೆದಾರನಿಗೆ ಸ್ವತಂತ್ರವಾಗಿ ವಿದ್ಯುತ್ತನ್ನು ಸ್ಥಳೀಯ ವಿತರಣಾ ಕಂಪನಿಗಳಲ್ಲದೇ ಬೇರೆ ಯಾವುದೇ ವಿತರಣಾ ಕಂಪನಿಯಿಂದ ಖರೀದಿಸಬಹುದಾಗಿದೆ.

ಕೆ.ಪಿ.ಟಿ.ಸಿ.ಎಲ್. ವಿಭಜನೆ

1064 (1478) - ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು (ಪ್ರಾದೇಶಿಕವಾರು (ವಲಯಗಳನ್ನಾಗಿ ವಿಭಜಿಸುವ ಕುರಿತು ಸರ್ಕಾರ ನಿರ್ಧರಿಸಿದೆಯೇ?

ಆ) ಈ ನಿಟ್ಟಿನಲ್ಲಿ ಖಾಸಗೀಕರಣ ಕಾರ್ಯಕ್ಕೂ ಇದಕ್ಕೂ ಇರುವ ವ್ಯತ್ಯಾಸಗಳೇನು?

ಇ) ಇದರಿಂದಾಗಿ ಗ್ರಾಹಕರಿಗೆ ಜಾಗ್ರತಿ ಉಂಟಾಗುತ್ತದೆಯೇ?

ಈ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯನ್ನು ವಲಯವಾರು ವಿಂಗಡಣೆ ಮಾಡುವುದರಿಂದ ಆಗುವ ಸಾಧಕ ಭಾದಕಗಳೇನು?

ಶ್ರೀ ಬಸವರಾಜ್ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು - ಸರ್ಕಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಯ ವಿತರಣಾ ಕಾರ್ಯವನ್ನು ಸರ್ಕಾರಿ ಸ್ವಾಮ್ಯದ ನಾಲ್ಕು ಪ್ರಾದೇಶಿಕವಾರು ವಿತರಣಾ ಕಂಪನಿಗಳಾಗಿ ರಚಿಸಿದೆ.

ಆ) ಪ್ರಸ್ತುತ ರಚಿಸಿರುವ ನಾಲ್ಕು ವಿತರಣಾ ಕಂಪನಿಗಳನ್ನು ಖಾಸಗೀಕರಣದ ಯುಕ್ತಿತಂತ್ರದ ಆಧಾರದ ಮೇಲೆ ಮುಂದೆ ಖಾಸಗೀಕರಣಗೊಳಿಸಲಾಗುವುದು, ನಂತರ ಸರ್ಕಾರಿ ಸ್ವಾಮ್ಯದಿಂದ ಬೇರ್ಪಡಿಸಿ ಗ್ರಾಹಕರಿಗೆ ದಕ್ಷ, ಮಿತವ್ಯಯಕಾರಿ, ಸ್ಪರ್ಧಾತ್ಮಕ ಮತ್ತು ವಿಶ್ವಸನೀಯ ಗುಣಟ್ಟದ ವಿದ್ಯುತ್ ಪೂರೈಕೆ ಮಾಡಿ ಸಾಧ್ಯವಾಗುತ್ತದೆ.